**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ತಾಂತ್ರಿಕ ಶಿಕ್ಷಣ ಇಲಾಖೆಯ ನಡವಳಿಗಳು**

ವಿಷಯ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಸಂಸ್ಥೆಗಳಲ್ಲಿನ ಉಳಿದ ಮೂಲ ವೃಂದ ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಖಾಲಿಯಿರುವ ಕಾರ್ಯಾಗಾರ ವಿಭಾಗದ ಪೋರ್‌ಮನ್ (ಸಿವಿಲ್/ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ / ಆಟೋಮೊಬೈಲ್ / ಎಲೆಕ್ಟ್ರಿಕಲ್ ವಿಭಾಗ) ಮುಂಬಡ್ತಿ ಹುದ್ದೆಗಳನ್ನು ಇನ್‌ಸ್ಟ್ರಕ್ಟರ್(ಸಿವಿಲ್/ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ / ಆಟೋಮೊಬೈಲ್ / ಎಲೆಕ್ಟ್ರಿಕಲ್ ವಿಭಾಗ) ವೃಂದದಿಂದ ಮುಂಬಡ್ತಿ ಮೂಲಕ ತುಂಬುವ ಬಗ್ಗೆ.

ಉಲ್ಲೇಖ
1. ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಸೂಚನೆ ಸಂಖ್ಯೆ:DTE-ADMIOEST(4)/9/2023, ದಿನಾಂಕ: 26.09.2023 ರಲ್ಲಿ ದಿನಾಂಕ: 31.12.2022 ರಲ್ಲಿ ಪ್ರಕಟಿಸಲಾಗಿರುವ ಇನ್‌ಸ್ಟ್ರಕ್ಟರ್ ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿ.
2. ದಿನಾಂಕ: 13.03.2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳ ಮೇರೆಗೆ
3. ಈ ಕಛೇರಿ ಜ್ಞಾಪನ ಸಂಖ್ಯೆ: DTE-ADMIOEST(4)/12/2024, ದಿ: 13.03.2024.

*****

ಪ್ರಸ್ತಾವನೆ:-

ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕಾರ್ಯಾಗಾರ ವಿಭಾಗದಲ್ಲಿನ ವಿವಿಧ ವಿಭಾಗಗಳ ಪೋರ್‌ಮನ್ ಹುದ್ದೆಗಳಿಗೆ ಆಯಾ ವಿಭಾಗದ ಇನ್‌ಸ್ಟ್ರಕ್ಟರ್ ಹುದ್ದೆಯಿಂದ ಶೇಕಡ 100 ರಷ್ಟು ಮುಂಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ(1) ರಂತೆ ಪ್ರಕಟಿಸಲಾಗಿರುವ ತಾಂತ್ರಿಕ ಶಿಕ್ಷಣ ಇಲಾಖೆಯ ಇನ್‌ಸ್ಟ್ರಕ್ಟರ್(ಸಿವಿಲ್/ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ / ಆಟೋಮೊಬೈಲ್ / ಎಲೆಕ್ಟ್ರಿಕಲ್ ವಿಭಾಗ) ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿಯ ಅನುಸಾರ ಕಾರ್ಯಾಗಾರ ವಿಭಾಗದ ಪೋರ್‌ಮನ್ (ಸಿವಿಲ್/ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ / ಆಟೋಮೊಬೈಲ್ / ಎಲೆಕ್ಟ್ರಿಕಲ್ ವಿಭಾಗ) ವೃಂದದಲ್ಲಿ ಖಾಲಿಯಿರುವ ಮುಂಬಡ್ತಿ ಹುದ್ದೆಗಳನ್ನು ತುಂಬಬೇಕಾಗಿರುತ್ತದೆ. ಈ ಸಂಬಂಧ ಉಲ್ಲೇಖ(2) ರಂತೆ ದಿನಾಂಕ: 13.03.2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಖಾಲಿಯಿರುವ ಪೋರ್‌ಮನ್(ಸಿವಿಲ್/ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ / ಆಟೋಮೊಬೈಲ್ / ಎಲೆಕ್ಟ್ರಿಕಲ್ ವಿಭಾಗ) ಮುಂಬಡ್ತಿ ಹುದ್ದೆಗಳನ್ನು ಜೇಷ್ಠತೆ, ಅರ್ಹತೆ, ಮೀಸಲಾತಿ ನಿಯಮಗಳನ್ವಯ ಅರ್ಹ ಇನ್‌ಸ್ಟ್ರಕ್ಟರ್ (ಸಿವಿಲ್/ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ / ಆಟೋಮೊಬೈಲ್ / ಎಲೆಕ್ಟ್ರಿಕಲ್ ವಿಭಾಗ) ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲು ತೀರ್ಮಾನಿಸಿ, ಸದರಿ ಅರ್ಹ ಇನ್‌ಸ್ಟ್ರಕ್ಟರ್ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯಲ್ಲಿ ಶಿಫಾರಸ್ಸು ಮಾಡಲಾಗಿರುತ್ತದೆ.

ಉಲ್ಲೇಖ(3) ರಲ್ಲಿ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ ಹಾಗೂ ಶಿಫಾರಸ್ಸಿನಂತೆ ಇನ್‌ಸ್ಟ್ರಕ್ಟರ್(ಸಿವಿಲ್/ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ / ಆಟೋಮೊಬೈಲ್ / ಎಲೆಕ್ಟ್ರಿಕಲ್ ವಿಭಾಗ) ವೃಂದದಿಂದ ಪೋರ್‌ಮನ್(ಸಿವಿಲ್/ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ / ಆಟೋಮೊಬೈಲ್ / ಎಲೆಕ್ಟ್ರಿಕಲ್ ವಿಭಾಗ) ವೃಂದಕ್ಕೆ ಬಡ್ತಿ ಹೊಂದಲು ಅರ್ಹರಿರುವ ಇನ್‌ಸ್ಟ್ರಕ್ಟರ್ ಸಿಬ್ಬಂದಿಗಳಿಗೆ ಮುಂಬಡ್ತಿ ಹುದ್ದೆಗೆ ಕೌನ್ಸಲಿಂಗ್ ಮುಖಾಂತರ ಸ್ಥಳನಿಯುಕ್ತಿಗೊಳಿಸಲು ದಿನಾಂಕ: 14.03.2024 ರಂದು ನಡೆದ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿತ್ತು. ಅದರಂತೆ ಮುಂಬಡ್ತಿಗೆ ಅರ್ಹರಿರುವ ಎಲ್ಲಾ ಇನ್‌ಸ್ಟ್ರಕ್ಟರ್‌ಗಳು ದಿನಾಂಕ: 14.03.2024 ರಂದು ನಡೆದ ಮುಂಬಡ್ತಿ ಸ್ಥಳನಿಯುಕ್ತಿ ಕೌನ್ಸಲಿಂಗ್‌ಗೆ ಹಾಜರಾಗಿದ್ದು, ಈ ಪೈಕಿ ಕೆಳಕಂಡ ಇನ್‌ಸ್ಟ್ರಕ್ಟರ್‌ಗಳು ಮಾತ್ರ

ಸ್ಥಳವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಅರ್ಹ ಸಿಬ್ಬಂದಿಗಳಿಗೆ ಫೋರ್‌ಮನ್ ಹುದ್ದೆಗೆ ಮುಂಬಡ್ತಿ ನೀಡಿ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: DTE-ADMIOEST(4)/12/2024** / 1533 **ದಿನಾಂಕ: 14.03.2024**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಇನ್‌ಸ್ಟ್ರಕ್ಟರ್ ಸಿಬ್ಬಂದಿಗಳಿಗೆ ಗ್ರೂಪ್-ಸಿ ವೃಂದದ ರಾಜ್ಯ ವೇತನ ಶ್ರೇಣಿ ರೂ. 37900-950-39800-1100-46400-1250-53900-1450-62600-1650-70850 ರಲ್ಲಿನ ಫೋರ್‌ಮನ್ ಹುದ್ದೆಗೆ ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ ಮುಂಬಡ್ತಿ ನೀಡಿ ಅವರ ಹೆಸರಿನ ಮುಂದೆ ಸೂಚಿಸಿರುವ ಖಾಲಿ ಹುದ್ದೆಗೆ ಎದುರಾಗಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ. ಸಂ. | ಇನ್‌ಸ್ಟ್ರಕ್ಟರ್ ಸಿಬ್ಬಂದಿಗಳ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು | ವಿಭಾಗ | ಫೋರ್‌ಮನ್ ಹುದ್ದೆಗೆ ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಲಾದ ಸಂಸ್ಥೆ | ಷರಾ |
|---|---|---|---|---|
| 1. | ರಾಜೇಶ್ ವಿ ಶೇಠ್<br>ಎಸ್.ಕೆ.ಎಸ್.ಜೆ.ಟಿ. ಸಂಸ್ಥೆ, ಬೆಂಗಳೂರು | ಸಿವಿಲ್ | ಎಸ್.ಕೆ.ಎಸ್.ಜೆ.ಟಿ. ಸಂಸ್ಥೆ, ಬೆಂಗಳೂರು | ಉಳಿದ ಮೂಲ ವೃಂದ |
| 2. | ಬಿ.ಎಂ. ಮಂಜುನಾಥ್<br>ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು | ಆಟೋಮೊಬೈಲ್ | ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು | ಉಳಿದ ಮೂಲ ವೃಂದ |

ಮುಂಬಡ್ತಿ ಹೊಂದಿರುವ ಇನ್‌ಸ್ಟ್ರಕ್ಟರ್ ಸಿಬ್ಬಂದಿಗಳು ಆದೇಶದ ಪ್ರತಿಯನ್ನು ಇಲಾಖಾ ವೆಬ್‌ಸೈಟ್‌ನಿಂದ ಪಡೆದು ಸ್ಥಳನಿಯುಕ್ತಿಗೊಳಿಸಲಾದ ಸಂಸ್ಥೆಯಲ್ಲಿ ಈ ಆದೇಶ ತಲುಪಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಬಡ್ತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

ಆಯುಕ್ತರು,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ:-

1. ಸಂಬಂಧಪಟ್ಟ ಇನ್‌ಸ್ಟ್ರಕ್ಟರ್ ಸಿಬ್ಬಂದಿಗಳಿಗೆ(ಸಂಬಂಧಿಸಿದ ಪ್ರಾಂಶುಪಾಲರ ಮೂಲಕ);
2. ಸಂಬಂಧಪಟ್ಟ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ;
3. ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ;
4. ನೋಡಲ್ ಅಧಿಕಾರಿ, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು).

ಪ್ರತಿ:-

1. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
2. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ಶಾಖಾ ರಕ್ಷಾ ಕಡತ.